01. ಪೂರ್ಣ ಹೆಸರು : ಜನಾರ್ದನ

02. ಜನ್ಮ ದಿನಾಂಕ : 20.09.1968

03. ವಿದ್ಯಾರ್ಹತೆ : ಎಂ.ಎ+ಎನ್.ಇ.ಟಿ

04. ವಿಳಾಸ : ಸಹಾಯಕ ಪ್ರಾಧ್ಯಾಪಕ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ – 583 276

05. ಸ್ಥಿರ ದೂರವಾಣಿ : ಕಚೇರಿ–08394 241337(318)

06. ಮೊಬೈಲ್ : 9480249149

07. ಪ್ಯಾಕ್ಸ್ ಸಂಖ್ಯೆ : 08394 241334

08. ಇ–ಮೇಲ್ : jmuninagara@yahoo.com

09. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಅಭಿವೃದ್ಧಿ ಅಧ್ಯಯನ ವಿಭಾಗ

10. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಸಹಾಯಕ ಪ್ರಾದ್ಯಾಪಕ ಮತ್ತು ಮುಖ್ಯಸ್ಥರು

11.ವಿಷಯ ತಜ್ಞತೆ

01. ಗ್ರಾಮೀಣ ಅಭಿವೃದ್ಧಿ ಮತ್ತು ಯೋಜನೆಗಳು

02. ಸ್ಥಳೀಯ ಸರಕಾರ ಮತ್ತು ಪಂಚಾಯತ್ ರಾಜ್

12. ಅಧಯಯನ ನಡೆಸುತ್ತಿರು ಆಸಕ್ತಿಯ ಕ್ಷೇತ್ರಗಳು

01. ಗ್ರಾಮೀಣ ಆರೋಗ್ಯ

02. ಗ್ರಾಮೀಣ ಮೂಲಭೂತ ಸೌಲಭ್ಯಗಳು

03. ಗ್ರಾಮೀಣ ಬಡತನ

04. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ

13. ಯೋಜನೆಗಳ ವಿವರ

13.1. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು

01. ನಿರ್ಮಲ ಕರ್ನಾಟಕ ಯೋಜನೆಯ ಮೌಲ್ಯಮಾಪನ ಅಧ್ಯಯನ:

ಗ್ರಾಮೀಣ ಶುಚಿತ್ವವನ್ನು ಹೆಚ್ಚಿಸುವ ದೃಷ್ಟಿಯಿಂದ ತೊಂಬತ್ತರ ದಶಕದಲ್ಲಿ ಕರ್ನಾಟಕ ಸರಕಾರ ಗ್ರಾಮೀಣ ಜನರಿಗೆ ಶೌಚಾಲಯಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಜಾರಿಗೆ ತಂದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆ ಅನುಷ್ಠಾನಗೊಂಡಿರುವ ಪ್ರಮಾಣ ಮತ್ತು ಬಳಕೆಯನ್ನು ಅಧ್ಯಯನ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಅಧ್ಯಯನದ ಮುಖ್ಯ ಫಲಿತಗಳು ಇಂತಿವೆ. 1. ಸರಕಾರ ಅಪೇಕ್ಷಿಸಿದ ಪ್ರಮಾಣದಲ್ಲಿ ಮತ್ತು



PDF created with pdfFactory trial version www.pdffactory.com

ಗುಣಮಟ್ಟದಲ್ಲಿ ಶೌಚಾಲಯಗಳು ನಿರ್ಮಾಣಗೊಂಡಿಲ್ಲ. 2. ನಿರ್ಮಾಣಗೊಂಡ ಬಹುತೇಕ ಶೌಚಾಲಯಗಳು ಅದರ ಮೂಲ ಉದ್ದೇಶಕ್ಕಿಂತ ಭಿನ್ನ ಉದ್ದೇಶಗಳಿಗೆ ಬಳಕೆಯಾಗುತ್ತಿದ್ದವು. 3. ಈ ಯೋಜನೆಗಾಗಿ ಮೀಸಲಿರಿಸಿದ ಸಂಪನ್ಮೂಲಗಳು ದೊಡ್ಡ ಪ್ರಮಾನದಲ್ಲಿ ದುರ್ಬಳಕೆ ಗೊಂಡಿವೆ.

02. ಜನಾಯೋಜನೆ–ಕೃಷ್ಣನಗರ ಗ್ರಾಮಪಂಚಾಯತ್ ಅಧ್ಯಯನ:

ಈ ಯೋಜನೆ ಎರಡು ಉದ್ದೇಶಗಳನ್ನು ಹೊಂದಿದೆ. ಒಂದು ಪಂಚಾಯತ್‌ನ ಒಟ್ಟಾರೆ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು ಜೊತೆಗೆ ಪಂಚಾಯತ್ ಮಟ್ಟದಿಂದ ಯೊಜನೆ ಸಿದ್ಧಪಡಿಸಬೇಕಾದರೆ ನಾಲ್ಕು ಅಭಿವೃದ್ಧಿ ಪಾಲುದಾರರು ಯೋಜನೆ ತಯಾರಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸಬೇಕಾಗಿದೆ. 1, ಗ್ರಾಮಸ್ಥರು 2, ಪಂಚಾಯತ್ ಸದಸ್ಯರು ಮತ್ತು ಅಧ್ಯಕ್ಷರುಗಳು. 3, ಪಂಚಾಯತ್ ಕಾರ್ಯದರ್ಶಿಗಳು ಮತ್ತು 4, ಸಂಬಂಧಿತ ಇತರ ಇಲಾಖೆಗಳು. ಈ ನಾಲ್ಕು ಅಭಿವೃದ್ಧಿ ಪಾಲುದಾರರು ಜನಾಯೋಜನೆಯಲ್ಲಿ ಪಾಲುಗೊಂಡ ಪ್ರಮಾಣ ಪಾಲುಗೊಳ್ಳದಿರಲು ಕಾರಣಗಳು, ಪಾಲುಗೊಳ್ಳುವಿಕೆಯ ಗುಣಮಟ್ಟ ಇತ್ಯಾದಿ ಸಮಸ್ಯೆಗಳನ್ನು ಈ ಯೋಜನೆಯಲ್ಲಿ ಅಧ್ಯಯನ ಮಾಡಲಾಗಿದೆ.

03. ಬಿಜಾಪುರ ಜಿಲ್ಲಾ ಮಾನವ ಅಭಿವೃದ್ಧಿ ಯೋಜನೆ:

ಯುಎನ್‌ಡಿಪಿಯು 1990ರಲ್ಲಿ ರಾಷ್ಟ್ರ ಮಟ್ಟದಲ್ಲಿ ರೂಪಿಸಿ ಪ್ರಚುರಪಡಿಸಿರುವ ಮಾನವ ಅಭಿವೃದ್ಧಿ ಸೂಚ್ಯಂಕ(ಮಾ.ಅ.ಸೂ)ದ ಮಾದರಿಯಲಿ ಬಿಜಾಪುರ ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸಲಾಗಿದೆ. ಈ ವರದಿಯು ತಳಮಟ್ಟದಲ್ಲಿ ಅಭಿವೃದ್ಧಿ ಪ್ರಕ್ರಿಯೆಯನ್ನು ಆಗುಮಾಡಲು ಹಾಗೂ ಅಲ್ಲಿ ಅಭಿವೃದ್ಧಿಯು ಸಂಭವಿಸಲು ಅಗತ್ಯವಾದ ಭೂಮಿಕೆಯನ್ನು ಒದಗಿಸುತ್ತದೆ. ತಳಮಟ್ಟದಲ್ಲಿ ಯೋಜನೆರೂಪಿಸಲು ವರದಿತು ಅಗತ್ಯವಾದ ಮಾಹಿತಿ ಒದಗಿಸುವುದರ ಜೊತೆಗೆ ತಳಮಟ್ಟದಲ್ಲಿನ ಸರ್ಕಾರಿ ಹಾಗೂ ಸರ್ಕಾರೇತರ ಅಭಿವೃದ್ಧಿ ಆಡಳಿತಾಧಿಕಾರಿಗಳಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮಾರ್ಗದರ್ಶಿ ಕೈಪಿಡಿಯಾಗಿ ಉಪಯುಕ್ತ ವಾಗುತ್ತದೆ. ಅಭಿವೃದ್ಧಿ ಅಧ್ಯಯನದಲ್ಲಿ ತೊಡ್ಗಿರುವವರಿಗೆ ಮತ್ತು ಆ ವಿಷಯದಲ್ಲಿ ಸಂಶೋಧನೆಯಲ್ಲಿ ನಿರತರಾಗುವವರಿಗೆ ಇದು ಉಪಯುಕ್ತವಾಗುತ್ತದೆ.

05. ಸರ್ವಶಿಕ್ಷಾ ಅಭಿಯಾನದ ವಸತಿಯುತ ಶಾಲೆಗಳ ಮೌಲ್ಯಮಾಪನ ಅಧ್ಯಯನ:

ಸರ್ವಶಿಕ್ಷಣ ಅಭಿಯಾನದಡಿ ಶಾಲೆ ಬಿಟ್ಟ ಮಕ್ಕಳನ್ನು ಆಯಾ ವಯಸ್ಸಿಗನುಗುಣವಾಗಿ ಇರಬೇಕಾದ ತರಗತಿಗಳಿಗೆ ಸೇರುವಂತೆ ಪ್ರೇರೇಪಿಸಲು 6ಆರ್.ಬಿ.ಸಿ(ಸಿಕ್ಸ್‌ಮಂತ್ಸ್ ರೆಸಿಡೆಶ್ನಿಯಲ್ ಬ್ರಿಜ್ ಕೋರ್ಸ್), 12ಆರ್.ಬಿ.ಸಿ(ಟ್ವಲ್ ಮಂತ್ಸ್ ರೆಸಿಡೆಶ್ನಿಯಲ್ ಬ್ರಿಜ್ ಕೋರ್ಸ್), ಆಶಾಕಿರಣ ಎಂಬ ಮೂರು ರೀತಿಯ ಸೇತುಬಂಧ ಯೋಜನೆಗಳನ್ನು ಬಳ್ಳಾರಿ ಜಿಲ್ಲೆಯ ಏಳೂ ತಾಲ್ಲೂಕುಗಳಲ್ಲಿ ಆರಂಭಿಸಲಾಗಿದೆ. ಇದರ ಕಾರ್ಯಕ್ಷಮತೆ ಕುರಿತ ಮೌಲ್ಯಮಾಪನ ವರದಿ ತಯಾರಿಸುವ ಕಾರ್ಯ ವಿಭಾಗಕ್ಕೆ ವಹಿಸಿಕೊಡಲಾಗಿತ್ತು. ಇದರ ಪ್ರಮುಕಾಂಶ ಯೋಜನೆಯ ನಿಗದಿತ ಉದ್ದೇಶಕ್ಕನುಗುಣವಾಗಿ ಕೆಲಸ ಆರಂಭವಾಗಿದೆಯಾದರೂ ಪೂರ್ಣವಾಗಿ ಆಗಿಲ್ಲ. ವಸತಿ ಶಾಲೆಗಳು ಕಾಟಾಚಾರಕ್ಕೆ ನಡೆಯುತ್ತಿದ್ದಂತೆ ಕಾಣುತ್ತವೆ. ವಿಧ್ಯಾರ್ಥಿಗಳ ಸಂಖ್ಯೆ, ಊಟ, ಉಪಚಾರ, ಮೂಲಭೂತ ಸೌಲಭ್ಯಗಳಂತಹ ಎಲ್ಲವೂ ಕಡಿಮೆಯಿರುವುದು ವಿಪರ್ಯಾಸವಾಗಿದೆ.



PDF created with pdfFactory trial version www.pdffactory.com

13.2. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು

01. ಅಂಗನವಾಡಿ ಕೇಂದ್ರಗಳು ಮತ್ತು ಗ್ರಾಮೀಣ ಅಭಿವೃದ್ಧಿ:

ಆಂಗನವಾಡಿ ಕೇಂದ್ರಗಳು ಕೇವಲ ಶಿಕ್ಷಣ ಕೇಂದ್ರಗಳಲ್ಲದೆ, ಇವು ಆರೋಗ್ಯ ಕೇಂದ್ರಗಳಾಗಿ; ಪೌಷ್ಠಿಕ ಆಹಾರದ ಕೇಂದ್ರಗಳಾಗಿ; ಸ್ತ್ರೀ–ಶಕ್ತಿ ಸಂಘಟನೆ ಮತ್ತು ನಿರ್ವಹಣೆಯ ಕೇಂದ್ರಗಳಾಗಿ; ಗ್ರಾಮದ ಒಟ್ಟಾರೆ ಅಭಿವೃದ್ಧಿಗೆ ಹಲವು ರೀತಿಯ ಮಾಹಿತಿಯನ್ನು ನೀಡುವ ಮತ್ತು ಮಾಹಿತಿಯನ್ನು ಪಡೆಯುವ ಕೇಂದ್ರಗಳಾಗಿ ಕೆಲಸ ನಿರ್ವಹಿಸುತ್ತಿವೆ. ಇವುಗಳ ಕಾರ್ಯಕ್ಷಮತೆ ಮತ್ತು ಅನಾನುಕೂಲತೆ ಇನ್ನಿತರೆ ಮಾಹಿತಿಯನ್ನು ಇಲ್ಲಿ ಚರ್ಚಿಸಲಾಗಿದೆ.

14. ಪ್ರಗತಿಯಲ್ಲಿರುವ ಯೋಜನೆಗಳು

01. ಆರೋಗ್ಯ ಶಿಕ್ಷಣ:

ಈ ಯೋಜನೆಯಲ್ಲಿ ಆರೋಗ್ಯಕ್ಕೂ, ಆರೋಗ್ಯ ಶಿಕ್ಷಣಕ್ಕೂ ಇರುವ ಸಂಬಂಧ ಕುರಿತು ವಿಶ್ಲೇಷಿಸಲಾಗುತ್ತಿದೆ. ಉತ್ತಮ ಆರೋಗ್ಯಕ್ಕೆ ಉತ್ತಮ ಶಿಕ್ಷಣ ಮತ್ತು ಅದಕ್ಕೆ ಪೂರಕವಾದ ಮೂಲಭೂತ ಸೌಲಭ್ಯಗಳ ಅಗತ್ಯತೆ ಬೇಕಾಗುತ್ತದೆ. ಹಾಗಾಗಿ ಯಾವ ಬಗೆಯ ಶಿಕ್ಷಣ ಯಾವಬಗೆಯ ಆರೋಗ್ಯಕ್ಕೆ ಸೂಕ್ತವಾಗಬಲ್ಲದು ಎನ್ನುವುದನ್ನೂ ಈಗಿರುವ ಆಕರಗಳ ಮೂಲಕ ಚರ್ಚಿಸಲಾಗುತ್ತಿದೆ.

02. ಗ್ರಾಮೀಣ ಆರೋಗ್ಯದಲ್ಲಿ ಉಪಕೇಂದ್ರಗಳ ಪಾತ್ರ:

ದೇಶದ ಸರಿ ಸುಮಾರು ಶೇ.75ರಷ್ಟು ಜನರು ವಾಸಿಸುತ್ತಿರುವ ಗ್ರಾಮೀಣ ಜನರ ಆರೋಗ್ಯ ರಕ್ಷಣೆ ಮತ್ತು ಸೌಲಭ್ಯದ ಜವಾಬ್ದಾರಿ ಹೊತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳ, ಗರ್ಭಿಣಿ ಬಾಣಂತಿಯರ ಹಾಗೂ ಮಕ್ಕಳ ಹಾರೈಕೆ ನೀಡುತ್ತಿರುವ ಉಪಕೇಂದ್ರಗಳ ಪಾತ್ರವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜೊತೆಗೆ ಗ್ರಾಮ ಮಟ್ಟದಲ್ಲಿ ಆರೋಗ್ಯ ಸೇವೆಗಳನ್ನು ನೀಡುತ್ತಿರುವ ಕಿರಿಯ ಆರೋಗ್ಯ ಸಹಾಯಕರ(ಎ.ಎನ್.ಎಂ) ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಚರ್ಚಿಸುವುದರ ಜೊತೆಗೆ ಆರೋಗ್ಯ ಸಹಾಯಕರ ಕರ್ತವ್ಯ ನಿರ್ವಹಣೆಯಲ್ಲಿ ಇರಬಹುದಾದ ತೊಂದರೆಗಳು, ಗೊಂದಲಗಳನ್ನು ಗುರುತಿಸಿ ಚರ್ಚಿಸುವ ಪ್ರಯತ್ನಮಾಡಲಾಗಿದೆ.

15. ಪ್ರಕಟಣೆಗಳು

15.1. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು

01. ಅಂಗನವಾಡಿ ಕೇಂದ್ರಗಳು ಮತ್ತು ಗ್ರಾಮೀಣ ಅಭಿವೃದ್ಧಿ:

ಆಂಗನವಾಡಿ ಕೇಂದ್ರಗಳು ಕೇವಲ ಶಿಕ್ಷಣ ಕೇಂದ್ರಗಳಲ್ಲದೆ, ಇವು ಆರೋಗ್ಯ ಕೇಂದ್ರಗಳಾಗಿ; ಪೌಷ್ಠಿಕ ಆಹಾರದ ಕೇಂದ್ರಗಳಾಗಿ; ಸ್ತ್ರೀ–ಶಕ್ತಿ ಸಂಘಟನೆ ಮತ್ತು ನಿರ್ವಹಣೆಯ ಕೇಂದ್ರಗಳಾಗಿ; ಗ್ರಾಮದ ಒಟ್ಟಾರೆ ಅಭಿವೃದ್ಧಿಗೆ ಹಲವು ರೀತಿಯ ಮಾಹಿತಿಯನ್ನು ನೀಡುವ ಮತ್ತು ಮಾಹಿತಿಯನ್ನು ಪಡೆಯುವ ಕೇಂದ್ರಗಳಾಗಿ ಕೆಲಸ ನಿರ್ವಹಿಸುತ್ತಿವೆ. ಇವುಗಳ ಕಾರ್ಯಕ್ಷಮತೆ ಮತ್ತು ತೊಂದರೆಗಳನ್ನು ಅರಿಯುವ ಸಲುವಾಗಿ ನಡೆಸಿದ ಅಧ್ಯಯನ ಇದಾಗಿದೆ. ಸುಮಾರು 52 ಅಂಗನವಾಡಿ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರನ್ನು ಸಂದರ್ಶಿಸಿ ಪಡೆದ ಮಾಹಿತಿಯಾಧಾರಿತ  ಅಧ್ಯಯನ ಇದಾಗಿರುತ್ತದೆ.



PDF created with pdfFactory trial version www.pdffactory.com

15.2. ವೈಯಕ್ತಿಕ ಪ್ರಕಟಿತ ಕೃತಿಗಳು– ಇಲ್ಲ

15.3. ಸಂಪಾದಿತ ಕೃತಿಗಳು:

1. ವಿಶ್ವವಿದ್ಯಾಲಯದ ಮುಖವಾಣಿಯಾದ **'ಚಲುವ ಕನ್ನಡ'** ದ್ವೈಮಾಸಿಕ ಪತ್ರಿಕೆಯ ಸಂಪಾದನೆಯನ್ನು ಮಾಡಿರುತ್ತೇನೆ. ಒಟ್ಟು 12 ಸಂಚಿಕೆಗಳನ್ನು ಹೊರತಂದಿರುತ್ತೇನೆ.

**16. ಪ್ರಕಟಿತ ಲೇಖನಗಳು:**

1. 'ಲೇಬರ್ಸ್ ಪಾರ್ಟಿಸಿಪೇಶನ್ ಇನ್ ಎಕನಾಮಿಕ್ ಡೆವೆಲಪ್‌ಮೆಂಟ್ ಆಫ್ ಕರ್ನಾಟಕ' ಎಂಬ ಲೇಖನವು ಸದರನ್ ಎಕನಾಮಿಸ್ಟ್ ಪತ್ರಿಕೆಯಲ್ಲಿ ಮೇ–1, 1997ರಲ್ಲಿ ಪ್ರಕಟವಾಗಿದೆ.
ಈ ಸಂಶೋಧನಾ ಲೇಖನವು ಕರ್ನಾಟಕದ ಆರ್ಥಿಕ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಎಷ್ಟರ ಮಟ್ಟಿಗಿದೆ ಎನ್ನುವುದರ ಕುರಿತ ಲೇಖನ. ಯಾವುದೇ ಉದ್ದಿಮೆ ಕಾರ್ಮಿಕನ ಕುಶಲತೆಯಿಂದ ನಡೆಯುವುದು ಸಹಜ. ಅದೇರೀತಿ ಕಾರ್ಮಿಕನ ಬದುಕಿಗೆ, ಅವನ ಜೀವನದ ಭದ್ರತೆಗೆ ಇರುವ ಕಾರ್ಮಿಕ ಕಾನೂನುಗಳ ಬಗ್ಗೆ ವಿವರಿಸಲಾಗಿದೆ.

2. ದಾಖಲು ಎನ್ನುವ ಲೇಖನವು **ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ,** ಸಂ.1, ಸಂ.2, ಜೂನ್–2002ರಲ್ಲಿ ಪ್ರಕಟವಾಗಿದೆ.
ಕರ್ನಾಟಕಕ್ಕೆ ಸಂಬಂಧಿಸಿದಂತೆ 2001ರ ಜನಗಣತಿ ವಿವರಗಳನ್ನು ಪ್ರಕಟಿಸಲಾಗಿದೆ. ಸಂಶೋಧಕರಿಗೆ ಅನುಕೂಲ ವಾಗುವಂತೆ ಜನಸಂಖ್ಯೆಯನ್ನು ಲಿಂಗವಾರು ಹಾಗೂ ಜಿಲ್ಲಾವಾರು ಮತ್ತು ಸಾಕ್ಷರತೆ ವಿವರಗಳನ್ನು ಲಿಂಗವಾರು ಹಾಗೂ ಜಿಲ್ಲಾವಾರು ಕೋಷ್ಟಕದಲ್ಲಿ ನೀಡಲಾಗಿದೆ. ಇಲ್ಲಿನ ವಿಶಿಷ್ಟತೆಯೆಂದರೆ ಜನಸಂಖ್ಯೆ ಹಾಗೂ ಸಾಕ್ಷರತೆಯ ವಿವರವನ್ನು ವಿಭಾಗವಾರು ಮತ್ತು ಪ್ರದೇಶವಾರು ನೀಡಲಾಗಿದೆ. ಸಾಕ್ಷರತೆಯನ್ನು ಶೇಕಡಾವಾರು ಮಾಪನ ಮಾಡಲಾಗಿದೆ. ಅಕ್ಷರತ್ಸರ ಸಂಖ್ಯೆಯನ್ನು ಜಿಲ್ಲೆ, ವಿಭಾಗ ಮತ್ತು ಪ್ರದೇಶಗಳಿಗೆ ಸಂಬಂಧಿಸಿದಂತೆ ನೀಡಲಾಗಿದೆ.

3. ದಾಖಲು–ಕರ್ನಾಟಕ: ತಾಲ್ಲೂಕುವಾರು ಜನಸಂಖ್ಯೆ, ಅಕ್ಷರಸ್ಥರು ಮತ್ತು ಸಾಕ್ಷರತೆ–2001 ಎನ್ನುವ ಲೇಖನವು **ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ,** ಸಂ.2, ಸಂ.1, ಜನವರಿ–2003ರಲ್ಲಿ ಪ್ರಕಟವಾಗಿದೆ.
ಈ ಸಂಚಿಕೆಯಲ್ಲಿ ತಾಲ್ಲುಕುವಾರು ಜನಸಂಖ್ಯೆ ಹಾಗೂ ಸಾಕ್ಷರತೆ ವಿವರವನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಪ್ರತ್ಯೇಕಿಸಿ ನೋಡಲಾಗಿದೆ. ತಾಲ್ಲೂಕು ಮತ್ತು ಜಿಲ್ಲಾವಾರು ಅಕ್ಷರಸ್ಥರ ಸಂಖ್ಯೆಯನ್ನು ಲಿಂಗವಾರು ನೀಡಲಾಗಿದೆ. ತಾಲ್ಲೂಕುವಾರು ಸಾಕ್ಷರತೆಯನ್ನು ಶೇಕಡವಾರು ನೀಡಲಾಗಿದೆ. ಇದು ಸಂಶೋಧಕರಿಗೆ ಮತ್ತು ಯೋಜನಾ ನಿರೂಪಕರಿಗೆ ಅನುಕೂಲವಾಗುತ್ತದೆ.

4. ಗ್ರಾಮೀಣ ರೈತರ ಸ್ವಯಂ ನಿಧಿ ಶಸ್ತ್ರಚಿಕಿತ್ಸಾ ಯೋಜನೆ–ಯಶಸ್ವಿನಿ, ಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಸಂ.6, ಸಂ–1, ಜನವರಿ–2007 ರಲ್ಲಿ ಪ್ರಕಟವಾಗಿದೆ.



PDF created with pdfFactory trial version www.pdffactory.com

ಈ ಸಂಶೋಧನಾ ಲೇಖನದಲ್ಲಿ **ಒಬ್ಬರಿಗಾಗಿ ಎಲ್ಲರು ಮತ್ತು ಎಲ್ಲರಿಗಾಗಿ ಒಬ್ಬರು** ಎಂಬ ಸಹಕಾರಿ ತತ್ವವನ್ನು ಆಧರಿಸಿ ಆರಂಭವಾದ ಯಶಸ್ವಿನಿ ಯೋಜನೆಯ ಮೂಲ ಉದ್ದೇಶ ಮತ್ತು ಅದರ ಕಾರ್ಯಕ್ಷಮತೆ ಕುರಿತ ಅಧ್ಯಯನ ಇದಾಗಿದೆ. ಗ್ರಾಮೀಣ ರೈತರು ಇದರ ಸದುಪಯೋಗವನ್ನು ಪಡೆಯುತ್ತಿರುವುದಾಗಿ ತಿಳಿದುಬರುತ್ತದೆ. ಅದೇರೀತಿ ಯೋಜನೆಯ ಫಲ ಪಡೆಯುವಲ್ಲಿಯೂ ಕೂಡ ಗೊಂದಲಗಳಿರುವುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

5. 'ಅಂಗನವಾಡಿ ಕೇಂದ್ರಗಳ ಕಾರ್ಯಕ್ಷಮತೆ' ಎನ್ನುವ ಲೇಖನವು **ಭಿವೃದ್ಧಿ ಅಧ್ಯಯನ** ಎಂಬ ಸಮಾಜ ವಿಜ್ಞಾನ ಪತ್ರಿಕೆಯಲ್ಲಿ ಸಂ.7, ಸಂ–1&2, ಜನವರಿ–2010 ರಲ್ಲಿ ಪ್ರಕಟವಾಗಿದೆ. ಈ ಸಂಶೋಧನಾ ಲೇಖನವು ನಗರಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಕಾರ್ಯಕ್ಷಮತೆ ಕುರಿತ ಅಧ್ಯಯನ ಲೇಖನವಾಗಿದೆ. ಆರು ತಿಂಗಳಿಂದ ಆರು ವರ್ಷದವರೆಗಿನ ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಪ್ರೋಟಿನ್‌ಯುಕ್ತ ಪೌಷ್ಟಿಕ ಆಹಾರವನ್ನು ವಿತರಿಸುವುದರ ಜೊತೆಗೆ ಆರೋಗ್ಯ ಇಲಾಖೆಯ ಸಮನ್ವಯದೊಂದಿಗೆ ಮಕ್ಕಳಿಗೆ ರೋಗನಿರೋಧಕ ಚುಚ್ಚುಮದ್ದು ಸೇವೆ, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ಆರೋಗ್ಯ ಮತ್ತು ಪೌಷ್ಟಿಕತೆ ಹಾಗೂ ಶಿಕ್ಷಣದ ಸೇವೆಯಂತಹ ಜವಾಬ್ದಾರಿಯುತ ಕೆಲಸಗಳನ್ನು ಗ್ರಾಮ ಮಟ್ಟದಲ್ಲಿ ನಿರ್ವಹಿಸುತ್ತಾ ಬರುತ್ತಿದ್ದಾರೆ. ವಿದ್ಯಾರ್ಹತೆ ಮತ್ತು ಸಂಭಾವನೆ ಕಡಿಮೆ ಇದ್ದು ಹೆಚ್ಚಿನ ಜವಾಬ್ದಾರಿ ನಿರ್ವಹಿಸುತ್ತಿರುವ ಕಾರ್ಯಕರ್ತೆಯರನ್ನು ಕುರಿತ ನಡೆಸಿದ ಅಧ್ಯಯನ ಇದಾಗಿದೆ.

೬. ಸರ್ವಶಿಕ್ಷಣ ಅಭಿಯಾನ ಮತ್ತು ವಸತಿ ಶಾಲೆಗಳು ಎಂಬ ಲೇಖನ **ಭಿವೃದ್ಧಿ ಅಧ್ಯಯನ** ಎಂಬ ಸಮಾಜ ವಿಜ್ಞಾನ ಪತ್ರಿಕೆಯಲ್ಲಿ ಸಂ.8, ಸಂ–1, ಜನವರಿ–ಜೂನ್–2010 ರಲ್ಲಿ ಪ್ರಕಟವಾಗಿದೆ. ಈ ಸಂಶೋಧನಾ ಲೇಖನವು ಸರ್ವಶಿಕ್ಷಣ ಅಭಿಯಾನದಡಿ ಕೈಗೊಂಡ ವಸತಿಯುತ ಶಾಲೆಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಿದ ಅಧ್ಯಯನ ಇದಾಗಿದೆ. ಈ ಯೋಜನೆಯಲ್ಲಿ ವಸತಿ ಶಾಲೆಗಳು ತನ್ನ ಮೂಲ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ. ವಸತಿ ಶಾಲೆಗಳ ಮೇಲುಸ್ತುವಾರಿ, ಶಿಕ್ಷಕರ ತರಭೇತಿ, ಕಟ್ಟನಿಟ್ಟಿನ ಕ್ರಮದ ಅಗತ್ಯತೆ ಹೆಚ್ಚು ಬಾಗಿರುವುದು ತಿಳಿಯುತ್ತದೆ. ಅದೇರೀತಿ ವಸತಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತಿರುವುದು ಕಂಡುಬರುತ್ತದೆ.

17. ಪಿಎಚ್.ಡಿ ಮಾರ್ಗದರ್ಶನ–ಇಲ್ಲ

18. ಎಂ.ಫಿಲ್ ಮಾರ್ಗದರ್ಶನ –ಇಲ್ಲ

19. ಪಡೆದ ಪ್ರಶಸ್ತಿ–ಇಲ್ಲ

20. ಶೈಕ್ಷಣಿಕ ಉದ್ದೇಶಕ್ಕಾಗಿ(ವಿಶ್ವವಿದ್ಯಾಲಯ ಹೊರತುಪಡಿಸಿ)ನಡೆಸಿದ ಯೋಜನೆಗಳು.

21. ನಿರ್ವಹಿಸಿದ ಇತರೆ ಕೆಲಸಗಳು

01. ಆಡಳಿತಾತ್ಮಕ ಕೆಲಸಗಳು–



PDF created with pdfFactory trial version www.pdffactory.com

ಅ. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಲಾಗಿದೆ.

ಆ. ದೂರಶಿಕ್ಷಣ ಅಧ್ಯಯನ ಮಂಡಲಿ ಸದಸ್ಯನಾಗಿ ಕೆಲಸ ನಿರ್ವಹಿಸಲಾಗಿದೆ.

ಇ. ವಿಭಾಗದ ಮುಖ್ಯಸ್ಥನಾಗಿ ಕೆಲಸ ನಿರ್ವಹಿಸಲಾಗುತ್ತಿದೆ.

ಈ. ವಿ.ವಿಯ ಪ.ಜಾ/ಪ.ಪಂ ವಿಶೇಷ ಘಟಕದ ಸಂಯೋಜನಾಧಿಕಾರಿಯಾಗಿ ಕೆಲಸ ನಿರ್ವಹಿಸಲಾಗುತ್ತಿದೆ.



PDF created with pdfFactory trial version www.pdffactory.com